# <u>*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*</u>

*ಎಸ್.ಸಿ.* 160/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಗಿರೀಶ | | <u>*ಪ್ರಮಾಣ ಮಾಡಿಸಿದ ದಿನಾಂಕಃ*</u> |
| **ತಂದೆ/ಗಂಡನ ಹೆಸರು** | ಃ ಶ್ರೀ ಗುರುಲಿಂಗಪ್ಪ | | **14.11.2024** |
| **ವಯಸ್ಸು** | ಃ **45** **ವರ್ಷ** | | |
| **ವೃತ್ತಿ** | ಃ ಗ್ರಾಮ ಪಂಚಾಯಿತಿ ಸೆಕ್ರೆಟರಿ | **ಪ್ರಾ.ಸಾ. ಃ** | **09** |
| **ವಾಸಸ್ಥಳ** | ಃ ಕೆರೆಹಳ್ಳಿ | **ಪಾ.ಸಾ. ಃ** | **03** |

<u>**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**</u>

. ದಿಃ*04.01.2022* ರಂದು ಕವಲಂದೆ ಪೋಲೀಸ್ ಠಾಣೆಯ ಪೋಲೀಸರು ಹಳೇಪುರ ಗ್ರಾಮದ ಕೆರೆ ಬಳಿ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಸಿದ್ದರಾಜು ಎನ್ನುವವರು ಆ ಸ್ಥಳ ತೋರಿಸಿ ಆ ಸ್ಥಳದಲ್ಲಿ ಬಾಲಕನ ಶವ ಬಿದ್ದಿತ್ತು ಎಂದು ಹೇಳಿದ್ದರು. ಆದರೆ ಆ ಬಾಲಕ ಸಿದ್ದರಾಜು ರವರಿಗೆ ಏನು ಆಗಬೇಕು ಎಂದು ನನಗೆ ಗೊತ್ತಿಲ್ಲ. ಆ ಸ್ಥಳದಲ್ಲಿ ಒಂದು ಮೊರ, ಒಂದು ಗೊಂಬೆ, ಅರಿಶಿಣ, ಕುಂಕುಮ, ಕಪ್ಪು ಮತ್ತು ಬಿಳಿ ಬಟ್ಟೆ, ನಿಂಬೆಹಣ್ಣು, ಹೂ ಇದ್ದವು. ಆ ಸ್ಥಳದಲ್ಲಿ ಮಣ್ಣು ತುಂಬಲು ಗುಂಡಿ ತೋಡಿದ್ದರು. ಆ ಸ್ಥಳ ದಕ್ಷಿಣಕ್ಕೆ ಕೆರೆ ತುಂಬಿತ್ತು. ಪೂರ್ವ ಪಶ್ಚಿಮವಾಗಿ ಒಂದು ಏರಿ ಇತ್ತು. ಶವ ಬಿದ್ದಿದೆ ಎಂದು ಹೇಳುವ ಸ್ಥಳದಲ್ಲಿ ಒಂದು ಬಾಟಲ್ ನೀರನ್ನು ತುಂಬಿಕೊಂಡಿದ್ದರು. ಈ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಆ ಕಾಲಕ್ಕೆ ಪೋಲೀಸರು ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ*-2* ಮಹಜರ್ ಅದೇ

ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ–*2*(ಸಿ) ಎಂದು ಗುರುತಿಸಿದೆ. ಸಂಜೆ *5* ರಿಂದ *6* ಗಂಟೆವರೆಗೆ ಆ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಮೊರ, ಗೊಂಬೆ, ಅರಿಶಿಣ, ಕುಂಕುಮ, ಬಾಳೆ ಎಲೆ ಆ ಮಹಜರ್ ಕಾಲಕ್ಕೆ ಅಮಾನತ್ತು ಪಡಿಸಿಕೊಂಡ ವಸ್ತುಗಳು ಇವೆ. ಸದರಿ ವಸ್ತುಗಳನ್ನು ಒಟ್ಟಿಗೆ ಎಂ.ಒ–*1* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ–*5* ರಿಂದ *7* ಆ ಮಹಜರ್ ಕಾಲಕ್ಕೆ ತೆಗೆದ ಪೊಟೋಗಳು ಇವೆ.

*2.* ಅದೇ ದಿನ ಸಂಜೆ *6.30* ಕ್ಕೆ ಕುಂಬ್ರಹಳ್ಳಿ ಗ್ರಾಮದ ಶ್ರೀನಿವಾಸ ಶೆಟ್ಟಿ ಎನ್ನುವವರ ಜಮೀನಿನ ಬಳಿ ಕರೆದುಕೊಂಡು ಹೋಗಿದ್ದರು. ಆ ಜಮೀನಿನಲ್ಲಿ ಒಂದು ಹೆಂಚಿನ ಮನೆ ಇತ್ತು. ಆ ಮನೆಯಲ್ಲಿ ಒಂದು ದೇವರ ಮನೆ ಇತ್ತು. ಆ ದೇವರ ಮನೆಯಲ್ಲಿ ಸುತ್ತಲೂ ದೇವರ ಪೊಟೋಗಳನ್ನು ಹಾಕಿದ್ದರು. ಕಾಳಿ ವಿಗ್ರಹ, ಮಣಿಯಮ್ಮನ ವಿಗ್ರಹ ಇದ್ದವು. ಆ ಸ್ಥಳವನ್ನು ಸಹ ಪಿರ್ಯಾದಿದಾರರು ತೋರಿಸಿ ಅದೇ ಸ್ಥಳದಲ್ಲಿ ಶ್ರೀನಿವಾಸ ಶೆಟ್ಟರು ಶಾಸ್ತ್ರ ಹೇಳುತ್ತಿದುದ್ದಾಗಿ ಹೇಳಿದ್ದರು. ಆ ಸ್ಥಳದಲ್ಲಿ ದೇವರ ಪಾದುಕೆಗಳು, ಶಿವನ ವಿಗ್ರಹ ಸಹ ಇದ್ದವು. ಈಗ ನಾನು ನೋಡುತ್ತಿರುವ ನಿ.ಪಿ–*3* ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ–*3*(ಸಿ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ–*8* ನಿ.ಪಿ–*3* ಮಹಜರ್ ಕಾಲಕ್ಕೆ ತೆಗೆದ ಪೊಟೋ ಇದೆ.

*3.* ಅದೇ ದಿನ ರಾತ್ರಿ *8* ಗಂಟೆಗೆ ಹೆಮ್ಮರಗಾಲದ ಶ್ರೀನಿವಾಸ ಶೆಟ್ಟಿ ಯವರ ಮನೆಗೆ ಕರೆದುಕೊಂಡು ಹೋಗಿದ್ದರು. ಆ ಮನೆಯಲ್ಲಿ ಸಿಮೆಂಟ್ ಮೆಟ್ಟಿಲುಗಳನ್ನು ಮಾಡಿ ಚೌಡೇಶ್ವರಿ ದೇವರನ್ನು ಪ್ರತಿಷ್ಠಾಪನೆ ಮಾಡಿದ್ದರು. ಅಲ್ಲೂ ಸಹ ಪಾದುಕೆಗಳು, ಶಿವಲಿಂಗ ಮತ್ತು ಬೇರೆ

ದೇವರುಗಳ ವಿಗ್ರಹಗಳು ಇದ್ದವು. ಅಲ್ಲೂ ಸಹ ಮಹಜರ್ ಮಾಡಿದ್ದರು. ಆ ಸ್ಥಳವನ್ನು ಸಹ ಪಿರ್ಯಾದಿದಾರರು ತೋರಿಸಿ ಆ ಸ್ಥಳದಲ್ಲೂ ಸಹ ಶ್ರೀನಿವಾಸ ಶೆಟ್ಟರು ಶಾಸ್ತ್ರ ಹೇಳುತ್ತಿದುದ್ದಾಗಿ ಹೇಳಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*4* ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ-*4(ಸಿ)* ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*4.* ನಿ.ಪಿ-*2* ಮಹಜರ್ ಕಾಲಕ್ಕೆ ಆ ಸ್ಥಳದಲ್ಲಿ ದೊರೆತಿದ್ದ ಶವ ತನ್ನ ಮಗ ಮಹೇಶನದ್ದು ಎಂದು ಹೇಳಿದ್ದರು ಎಂದರೆ ನಿಜ. ನಿ.ಪಿ-*3* ಮಹಜರ್ ಮಾಡಿದ್ದ ಸ್ಥಳ ನಿಂಗಶೆಟ್ಟಿ ಇವರ ಜಮೀನಿನಲ್ಲಿನ ಜಿಂಕ್ ಶೀಟ್ ತಗಡಿನ ಮನೆಯಲ್ಲಿದೆ ಎಂದರೆ ನಿಜ. ಆ ಮನೆಯಲ್ಲಿ ಟೇಬಲ್ ಕುರ್ಚಿ ಇಟ್ಟಿದ್ದರು ಮತ್ತು *4* ಗೋಡೆಗಳ ಮೇಲೆ ವಿವಿಧ ರಾಕ್ಷಸ ಅವತಾರದ ಚಿತ್ರಗಳನ್ನು ಬಿಡಿಸಿದ್ದರು ಮತ್ತು ಸಣ್ಣ ಸಣ್ಣ ಬೊಂಬೆಗಳನ್ನು ಪೂರ್ವಾಭಿಮುಖಾಗಿ ಇಟ್ಟಿದ್ದರು ಎಂದರೆ ನಿಜ. ನಿ.ಪಿ-*4* ಮಹಜರ್ ಮಾಡಿದ ಸ್ಥಳದಲ್ಲಿ ಮಲೆಯಾಳದಮ್ಮ, ಚೌಡೇಶ್ವರಿ ವಿಗ್ರಹಗಳು ಅವುಗಳ ಕೆಳಭಾಗದಲ್ಲಿ ಸಣ್ಣ ಸಣ್ಣ ವಿಗ್ರಹಗಳು ಗೋಡೆಗಳಲ್ಲಿ ಕಾಳಿ ಮತ್ತು ದೇವರ ಪೊಟೋಗಳು, ದಕ್ಷಿಣದ ಗೊಡೆಗೆ ಹೊಂದಿಕೊಂಡು ಒಂದು ಟೇಬಲ್ ಕುರ್ಚಿ ಇದ್ದವು ಎಂದರೆ ನಿಜ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಸಿ.ಎ.ಜಿ ರವರಿಂದಃ-**

*5.* ನನ್ನ ತಂದೆಯ ಹೆಸರು ಮರಿಲಿಂಗಪ್ಪ ಅಲ್ಲ ಗುರುಲಿಂಗಪ್ಪ ಇರುತ್ತದೆ. ನನಗೆ ಕೊಟ್ಟಿದ್ದ ನೋಟಿಸ್ ನಲ್ಲಿ ಮರಿಲಿಂಗಪ್ಪ ಎಂದು ನಮೂದಿದೆ ಎಂದರೆ ನಿಜ. ನನ್ನ ತಂದೆಯ ಹೆಸರು

ತಪ್ಪಾಗಿದ್ದಕ್ಕೆ ನಾನು ನೋಟಿಸ್ ಪಡೆಯಲು ತಿರಸ್ಕಾರ ಮಾಡಿರಲಿಲ್ಲ ಸಾಕ್ಷಿ ಸ್ವತಃ ಹೇಳುತ್ತಾರೆ ಆ ಬಗ್ಗೆ ಮೌಖಿಕವಾಗಿ ತನಿಖಾಧಿಕಾರಿಗೆ ಹೇಳಿದ್ದೆ. ನೋಟಿಸ್ ಅನ್ನು ನಮ್ಮ ಕಛೇರಿಯಲ್ಲೇ ಕೊಟ್ಟಿದ್ದರು. ಆ ಕಾಲಕ್ಕೆ ನಾನು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ನೋಟಿಸ್ ನಲ್ಲಿ ನಮ್ಮ ಕಛೇರಿಯ ಸೀಲ್ ಮತ್ತು ಸಮಯ ನಮೂದಿಲ್ಲ. ಮಹಜರ್ ಗೆ ಹೋಗಲು ನಮ್ಮ ಕಛೇರಿಯ ಮೇಲಾಧಿಕಾರಿಗಳಿಂದ ಪರವಾನಗಿ ಪಡೆದಿದ್ದೇನೆ ಆದರೆ ಅದನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ. ನಾನು ಚಾಮರಾಜನಗರ ತಾಲೂಕಿನ ಕೆರೆಹಳ್ಳಿಯಲ್ಲಿ ವಾಸವಿದ್ದೇನೆ. ನಾನು ನೇರಳೆ ಗ್ರಾಮ ಪಂಚಾಯಿತಿಗೆ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ನೋಟಿಸ್ ಕೊಟ್ಟಾಗ ನನ್ನ ಸಮಕ್ಷಮ ಬೇರೆ ಯಾರಿಗೂ ನೋಟಿಸ್ ಕೊಟ್ಟಿಲ್ಲ. ಮಹಜರ್ ಗೆ ಹೋಗಿದ್ದ ಕೆರೆ ಸಾರ್ವಜನಿಕರು ಉಪಯೋಗಿಸುವ ಕೆರೆ ಎಂದರೆ ನಿಜ. ಆ ಕೆರೆಗೆ ಸಾರ್ವಜನಿಕರು ದನಗಳಿಗೆ ನೀರು ಕುಡಿಸಲು ಹೊಗುತ್ತಾರೆ ಎಂದರೆ ನಿಜ. ಆ ಕೆರೆ ಸುತ್ತಲೂ ವ್ಯವಸಾಯದ ಜಮೀನು ಇದೆ ಎಂದರೆ ನಿಜ. ಆ ಕೆರೆ ಆಕ್ಕಪಕ್ಕದಲ್ಲಿ ಬೆಳಗ್ಗಿನಿಂದ ಸಂಜೆ ವರೆಗೆ ವ್ಯವಸಾಯಕ್ಕೆ ಹೊಗುವ ಜನರು ಇರುತ್ತಾರೆ ಎಂದರೆ ನಿಜ. ಕೆರೆಗೆ ಯಾರಾದರೂ ಹೊದರೆ ಬಂದರೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ನಿಜ. ನಾನು ಹೋದಾಗ ಅಕ್ಕಪಕ್ಕದ ಜನರು ಬಂದಿರಲಿಲ್ಲ. ಆ ಕೆರೆ ಬಳಿ ಸ್ಥಳೀಯರು ಪೂಜೆ ಪುನಸ್ಕಾರ ಮಾಡುತ್ತಾರೆ ಎಂದರೆ ನಿಜ. ಆ ಕೆರೆ ಸುತ್ತಲೂ ಪೂಜೆ ಮಾಡಿದ ನಿಶಾನೆಗಳು ಕಂಡುಬರುತ್ತಿತ್ತು ಎಂದರೆ ನಿಜ. ಆ ಕೆರೆಗೆ ಹೊಗಲು ಯಾವುದೇ ಅಡೆ ತಡೆಗಳು ಇಲ್ಲ ಎಂದರೆ ನಿಜ. ಆ ಕೆರೆಯಲ್ಲಿ ನೀರಿನ ಆಳ ಎಷ್ಟಿದೆ ಎಂದು ನಾನು ನೋಡಿಲ್ಲ. ಆ ಕೆರೆಗೆ ವಾಹನಗಳು ಹೋದ ನಿಶಾನೆಗಳನ್ನು ನಾನು ನೋಡಿಲ್ಲ. ಅಮಾನತ್ತು ಪಡಿಸಿಕೊಂಡ

ವಸ್ತುಗಳನ್ನು ಸೀಲ್ ಮಾಡಿ ಅವುಗಳಿಗೆ ನನ್ನ ಸಹಿ ಪಡೆದಿದ್ದರು. ಆದರೆ ಅವುಗಳ ಮೇಲೆ ನನ್ನ ಇಲಾಖೆಯ ಸೀಲ್ ಹಾಕಿಲ್ಲ. ಕೆರೆ ಬಳಿ ಮಹಜರ್ ಅನ್ನು ಪೋಲೀಸರೇ ಹೇಳಿ ಬರೆಸಿದ್ದರು.

*6.* ಆ ದಿನ ನಿಂಗಶೆಟ್ಟಿ ಮತ್ತು ಶ್ರೀನಿವಾಸ ಶೆಟ್ಟಿ ಇವರ ಮನೆಯ ದಾಖಲೆಗಳನ್ನು ನೋಡಿಲ್ಲ. ಆ ಮನೆಗಳಿಗೆ ಪೋಲೀಸರೇ ನಮ್ಮನ್ನು ಕರೆದುಕೊಂಡು ಹೋಗಿದ್ದರು ಎಂದರೆ ನಿಜ. ನಾವು ಹೋದಾಗ ಆ ಮನೆಗಳಲ್ಲಿ ಯಾರು ವಾಸವಿರಲಿಲ್ಲ. ನಿಂಗಶೆಟ್ಟಿ ಇವರ ಮನೆ ವ್ಯವಸಾಯದ ಜಮೀನಿನಲ್ಲಿದೆ ಎಂದರೆ ನಿಜ. ಆ ಮನೆಯ ಸುತ್ತಮುತ್ತ ವ್ಯವಸಾಯ ಮಾಡುತ್ತಿದ್ದರು ಎಂದರೆ ನಿಜ. ಆ ಕಾಲಕ್ಕೂ ನಾನು ಮಹಜರ್ ಹೇಳಿ ಬರೆಸಿಲ್ಲ. ನಿಂಗಶೆಟ್ಟಿ ಯವರ ಮನೆಯಲ್ಲಿ ಮಹಜರ್ ಮಾಡಿದಾಗ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಆ ಮನೆಯಲ್ಲಿ ಯಾರು ವಾಸ ಮಾಡುತ್ತಿರುವ ಗುರುತುಗಳು ಇರಲಿಲ್ಲ. ಆ ಮನೆಗೆ ಬೀಗ ಹಾಕಿದ್ದರು. ಮಹಜರ್ ಕಾಲಕ್ಕೆ ಪೋಲೀಸರು ಅದನ್ನು ತೆಗೆಸಿದ್ದರು. ಆದರೆ ಆ ಕುರಿತು ಮಹಜರ್ ನಲ್ಲಿ ನಮೂದು ಇಲ್ಲ. ಆ ಮನೆಗಳ ದಾಖಲೆಗಳು ಪಂಚಾಯಿತಿಯಲ್ಲಿ ದೊರೆಯುತ್ತವೆ ಎಂದರೆ ನಿಜ. ಶ್ರೀನಿವಾಸ ಶೆಟ್ಟಿ ಇವರ ಮನೆ ಸಂಖ್ಯೆ ಗೊತ್ತಿಲ್ಲ. ಆ ಮನೆಗಳ ದಾಖಲೆಗಳನ್ನು ಪೋಲೀಸರು ನನ್ನಿಂದ ಪಡೆದಿಲ್ಲ. ಆ ಮನೆಯಲ್ಲಿ ಶ್ರೀನಿವಾಸ ಶೆಟ್ಟಿ ವಾಸವಿದ್ದ ಬಗ್ಗೆ ಪ್ರತ್ಯೇಕ ನಿಶಾನೆ ಇರಲಿಲ್ಲ. ಆ ಮನೆ ಸುತ್ತಲೂ ಬೇರೆ ವಾಸದ ಮನೆಗಳು ಇವೆ ಎಂದರೆ ನಿಜ. ಹೆಮ್ಮರಗಾಲ ಗ್ರಾಮದಲ್ಲಿ ಶಾಸ್ತ್ರ ಹೇಳುವ ಬಹಳಷ್ಟು ಕುಟುಂಬಗಳಿವೆ ಎಂದರೆ ನಿಜ. ಶ್ರೀನಿವಾಸ ಶೆಟ್ಟಿ ಇವರ ಮನೆಗೆ ಯಾರಾದರೂ ಬಂದರೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ನಿಜ. ಆ ಮಹಜರ್ ಅನ್ನು ನಾನು ಹೇಳಿ ಬರೆಸಿಲ್ಲ. ಆ ಕಾಲಕ್ಕೆ ಅಕ್ಕಪಕ್ಕದವರನ್ನು ಪೋಲೀಸರು ಕರೆಸಿರಲಿಲ್ಲ. ನಾನು ಬೇರೆ ಪ್ರಕರಣಗಳಲ್ಲಿ ಸಾಕ್ಷಿಯಾಗಿ ಸಹಿ ಮಾಡಿಲ್ಲ. ಬೇರೆ ಸಂದರ್ಭಗಳಲ್ಲಿ

ಪೋಲೀಸರು ನನಗೆ ಪರಿಚಯವಾಗಿದ್ದರು. *3* ಮಹಜರ್ ಗಳನ್ನು ಪೋಲೀಸ್ ಠಾಣೆಯಲ್ಲೇ ತಯಾರಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಮ್ಮನ್ನು ಆ ಸ್ಥಳಗಳಿಗೆ ಕರೆದುಕೊಂಡು ಹೋಗಿದ್ದರು ಮತ್ತು ಸಿದ್ದರಾಜು ಆ ಸ್ಥಳ ತೋರಿಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲೇ ಕೆಲವು ವಸ್ತುಗಳನ್ನು ಇಟ್ಟು ಮಹಜರ್ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾಖಲೆಗಳಿಗೆ ವಿರುದ್ಧವಾಗಿ ಸಾಕ್ಷಿ ಹೇಳಿದಲ್ಲಿ ನನ್ನ ಕರ್ತವ್ಯಕ್ಕೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-** ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*